# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 789 |
| ಸದಸ್ಯರ ಹೆಸರು | ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | 23.07.2024 |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ವಿಜಯಪುರ ಜಿಲ್ಲೆ ವ್ಯಾಪ್ತಿಯಲ್ಲಿ ಪರವಾನಿಗೆ ಪಡೆದು ಕಲ್ಲು ಗಣಿಗಾರಿಕೆ ನಡೆಸುತ್ತಿರುವ ಕ್ರಷರ್‌ಗಳ ಸಂಖ್ಯೆ ಎಷ್ಟು; | ವಿಜಯಪುರ ಜಿಲ್ಲಾ ವ್ಯಾಪ್ತಿಯಲ್ಲಿ ಮಂಜೂರು ಮಾಡಲಾಗಿರುವ ಕಲ್ಲುಗಣಿ ಗುತ್ತಿಗೆ / ಲೈಸೆನ್ಸ್ ಮತ್ತು ಸ್ಟೋನ್ ಕ್ರಷರ್ ಘಟಕಗಳ ವಿವರ ಈ ಕೆಳಕಂಡಂತಿದೆ: (see table below) |

| ಅಲಂಕಾರಿಕ ಗಣಿ ಗುತ್ತಿಗೆ / ಲೈಸೆನ್ಸ್ | ಸಂಖ್ಯೆ | ಕಾರ್ಯ ನಿರತ | ನಿಷ್ಕ್ರಿಯ |
|---|---|---|---|
| ಕಟ್ಟಡ ಕಲ್ಲು ಗಣಿ ಗುತ್ತಿಗೆ / ಲೈಸೆನ್ಸ್ | 116 | 75 | 41 |
| ಸ್ಟೋನ್ ಕ್ರಷರ್ ಘಟಕಗಳು | 104 | 70 | 34 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಆ) | ಇವುಗಳಿಂದ ಸರ್ಕಾರಕ್ಕೆ ಪ್ರತಿ ವರ್ಷ ಎಷ್ಟು ರಾಜಸ್ವ ಬರುತ್ತಿದೆ; (ವಿವರ ನೀಡುವುದು) | ವಿಜಯಪುರ ಜಿಲ್ಲಾ ವ್ಯಾಪ್ತಿಯಲ್ಲಿ ಕಲ್ಲುಗಣಿ ಗುತ್ತಿಗೆ / ಲೈಸೆನ್ಸ್‌ದಾರರಿಂದ ಕಳೆದ ಮೂರು ವರ್ಷಗಳಲ್ಲಿ ಸಂಗ್ರಹಿಸಿರುವ ರಾಜಧನದ ವಿವರ ಕೆಳಕಂಡಂತಿದೆ. (see table below) |

| ಕ್ರ. ಸಂ. | ವರ್ಷ | ಸಂಗ್ರಹಿಸಿದ ರಾಜಧನ (₹ಲಕ್ಷಗಳಲ್ಲಿ) |
|---|---|---|
| 1. | 2021-22 | 2710.83 |
| 2. | 2022-23 | 4764.74 |
| 3. | 2023-24 | 4111.57 |
| ಒಟ್ಟು | | 11587.14 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಇ) | ಈ ಕ್ರಷರ್‌ಗಳ ಮಾಲೀಕರು ಪ್ರತಿ ವರ್ಷ ಸರಿಯಾಗಿ ತೆರಿಗೆಯನ್ನು ಪಾವತಿಸಿದ್ದಾರೆಯೇ; ಬಾಕಿ ಏನಾದರೂ ಇದೆಯೇ; (ಸಂಪೂರ್ಣ ವಿವರ ನೀಡುವುದು) | ಸ್ಟೋನ್ ಕ್ರಷರ್ ಘಟಕದಲ್ಲಿ ಬಳಕೆ ಮಾಡುವ ಕಚ್ಚಾ ಕಟ್ಟಡ ಕಲ್ಲಿಗೆ ಕಲ್ಲುಗಣಿ ಗುತ್ತಿಗೆದಾರರಿಂದ ರಾಜಧನ ಮತ್ತು ಅನ್ವಯಿಕ ಇತರೆ ಶುಲ್ಕಗಳನ್ನು ಸಂದಾಯ ಮಾಡುತ್ತಿದ್ದು, ಸ್ಟೋನ್ ಕ್ರಷರ್ ಘಟಕದಲ್ಲಿ ಸಂಸ್ಕರಿಸಿದ ಕಟ್ಟಡ ಕಲ್ಲಿನ ಉತ್ಪನ್ನಗಳಿಗೆ ರಾಜಧನ ಪಾವತಿಸಬೇಕಾಗಿರುವುದಿಲ್ಲ. |
| ಈ) | ಬಾಕಿ ಉಳಿಸಿಕೊಂಡಿರುವ ತೆರಿಗೆಯನ್ನು ಯಾವ ಕಾಲಮಿತಿ ಯೊಳಗಾಗಿ ವಸೂಲಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದು? | • ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 36 ರಂತೆ ಗುತ್ತಿಗೆದಾರರು ರಾಜಧನ ಪಾವತಿ ಮಾಡಿ ಕಲ್ಲುಗಣಿ ಗುತ್ತಿಗೆ /ಲೈಸೆನ್ಸ್ ಪ್ರದೇಶದಿಂದ ಸಂಬಂಧಪಟ್ಟ ಸ್ಟೋನ್ ಕ್ರಷರ್ ಘಟಕಕ್ಕೆ ಖನಿಜ ಸಾಗಾಣಿಕೆ ಮಾಡಬೇಕಾಗಿರುತ್ತದೆ. |

. . . 2

| | | |
|---|---|---|
| | | • ಗುತ್ತಿಗೆದಾರರು ಗಣಿಗಾರಿಕೆ ನಡೆಸಿ ತೆಗೆದು ಸಾಗಾಣಿಕೆ ಮಾಡಿದ ಪ್ರಮಾಣಕ್ಕೆ ಅನುಗುಣವಾಗಿ ರಾಜಧನ ಪಾವತಿಸಿರುವ ಬಗ್ಗೆ ಖಚಿತಪಡಿಸಿಕೊಳ್ಳಲು 2018-19 ನೇ ಸಾಲಿನಲ್ಲಿ ಕಲ್ಲುಗಣಿ ಗುತ್ತಿಗೆಗಳನ್ನು Drone/ DGPS ಉಪಕರಣ ಬಳಸಿ ಸರ್ವೇ ಕಾರ್ಯ ನಡೆಸಲಾಗಿರುತ್ತದೆ.<br>• ಸದರಿ ಸರ್ವೇ ಮೂಲಕ ಕಲ್ಲುಗಣಿ ಗುತ್ತಿಗೆ ಪ್ರದೇಶಗಳಲ್ಲಿ ಖನಿಜ ರವಾನೆ ಪರವಾನಗಿ ಪಡೆಯದೆ ಸಾಗಾಣಿಕೆ ಮಾಡಿರುವ ಪ್ರಮಾಣಕ್ಕೆ ವಿಧಿಸಿರುವ 05 ಪಟ್ಟು ರಾಜಧನ ₹295.70 ಕೋಟಿಗಳು ಬಾಕಿ ಇರುತ್ತದೆ.<br>• ಪ್ರಸ್ತುತ, ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ (KSRSAC) ರವರಿಂದ ಕಟ್ಟಡ ಕಲ್ಲುಗಣಿ ಗುತ್ತಿಗೆ ಪ್ರದೇಶಗಳನ್ನು ಡ್ರೋಣ್ ಸಮೀಕ್ಷೆ ಮೂಲಕ ಸರ್ವೆ ಕಾರ್ಯ ನಡೆಸುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.<br>• ಸದರಿ ಸಮೀಕ್ಷೆ ವರದಿಯಂತೆ ಗುತ್ತಿಗೆದಾರರು ಹೆಚ್ಚುವರಿಯಾಗಿ ತೆಗೆದು ರಾಜಧನ ಪಾವತಿಸದೆ ಸಾಗಾಣಿಕೆ ಮಾಡಿರುವ ಪ್ರಮಾಣಕ್ಕೆ ಅನುಗುಣವಾಗಿ ನಿಗದಿತ ಕಾಲಮಿತಿಯೊಳಗೆ ರಾಜಧನ/ದಂಡದ ಮೊತ್ತವನ್ನು ಸಂಗ್ರಹಿಸಲು One Time Settlement ಪದ್ಧತಿ ತರುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ. |

ಸಂಖ್ಯೆ ಸಿಐ-ಎಂಎಂಎನ್/169/2024

**(ಎಸ್.ಎಸ್. ಮಲ್ಲಿಕಾರ್ಜುನ)**
ಗಣಿ ಮತ್ತು ಭೂವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು.